<u>**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ**</u>

**ಸಿ.ಸಿ. ನಂ. 361/16**

ಚಾ.ಸಾ. 100

ಫ್ರಾ.ಸಾ. 57

ಸಾಕ್ಷಿದಾರರ ಹೆಸರು – ರೇವಣಸಿದ್ದಪ್ಪ

ತಂದೆಯ ಹೆಸರು – ಸಂಜೀವಪ್ಪ ಕಟ್ಟಿಮನಿ

ವಯಸ್ಸು – 73 ವರ್ಷ

ಉದ್ಯೋಗ – ನಿವೃತ್ತ ಫ್ರಾಚಾರ್ಯರು

ವಾಸ್ತವ್ಯ – ವಿಜಯಪುರ

(ಇಂದು ದಿನಾಂಕಃ 02-06-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

<u>**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**</u>

ಸರ್ಕಾರಿ ಪದವಿಪೂರ್ವ ಕಾಲೇಜು ವಿಜಯಪುರ 2000 ರಿಂದ 2006 ರವರೆಗೆ ಫ್ರಾಚಾರ್ಯರಾಗಿ ಕರ್ತವ್ಯ ನಿರ್ವಹಿಸಿದ್ದೇನೆ. 2002 ನೇ ಸಾಲಿನಲ್ಲಿ ಅಬ್ದುಲ್ ಸತ್ತಾರ ಮತ್ತು ಮಹಮ್ಮದ ದಸ್ತಗಿರಿ ಇವರು ನಮ್ಮ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದರ ಬಗ್ಗೆ ಕಾರವಾರ ನಗರ ಠಾಣೆಯವರು ದಾಖಲಾತಿಯನ್ನು ಕೇಳಿದ್ದರು. ಸದರಿಯವರು ನಮ್ಮ ಕಾಲೇಜಿನಲ್ಲಿ ಬಾಹ್ಯ ಮೂಲ ವಿದ್ಯಾರ್ಥಿಗಳಾಗಿ ಪ್ರವೇಶ ಪಡೆದ ಬಗ್ಗೆ ವರ್ಗಾವಣೆ ಪ್ರಮಾಣ ಪತ್ರ ಪಡೆದ ದೃಡಿಕೃತ ನಕಲುಗಳನ್ನು ದಿಃ 24-07-2002 ರಂದು ನೀಡಿರುತ್ತೇನೆ . ಸದರಿ ದಾಖಲಾತಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲಾತಿಗಳನ್ನು ನಿಪಿ-60 ಮತ್ತು ನಿಪಿ-61 ಎಂದು, ಸಾಕ್ಷಿಯ ಸಹಿಯನ್ನು ನಿಪಿ-60(ಎ) ಮತ್ತು ನಿಪಿ-61(ಎ) ಎಂದು ಗುರುತಿಸಲಾಯಿತು.

<u>**ಪಾಟೀ ಸವಾಲುಃ 7 ನೇ**</u> ಆರೋಪಿ ಪರ ವಕೀಲರಿಂದಃ

ಅಬ್ದುಲ್ ಸತ್ತಾರ ಮತ್ತು ಮಹಮ್ಮದ ದಸ್ತಗಿರಿ ಇವರು ನಮ್ಮ ಪದವಿಪೂರ್ವ ಕಾಲೇಜಿನಲ್ಲಿ ಯಾವತ್ತೂ ಓದಿಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಇನ್ನುಳಿದ ಆರೋಪಿತ ಪರ ವಕೀಲರು ಹಾಜರಿದ್ದು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ ಎಂದು ಹೇಳುತ್ತಾರೆ .

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ